1618(1829) ಶ್ರೀ ಪರಮೇಶ್ವರ ನಾಯ್ಕ್ ಪಿ.ಟಿ. (ಹರಪನಹಳ್ಳಿ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಹರಪನಹಳ್ಳಿ ಕೆ.ಎಸ್.ಆರ್. ಟಿ.ಸಿ.ಬಸ್ ಡಿಪೋ ನಿರ್ಮಾಣಕ್ಕಾಗಿ ಭೂಮಿಯನ್ನು ವಶಪಡಿಸಿಕೊಂಡಿದ್ದರೂ ಸಹ ಇದುವರೆವಿಗೂ ಕೆಲಸ ಪ್ರಾರಂಭಿಸದಿರಲು ಕಾರಣವೇನು;

ಆ. ಈ ನಿರ್ಮಾಣಕ್ಕಾಗಿ ಎಷ್ಟು ಹಣವನ್ನು ಸರ್ಕಾರ ನಿಗದಿಗೊಳಿಸಲಾಗಿದೆ ಹಾಗೂ ಖರ್ಚುಮಾಡಲಾಗಿದೆ;

ಇ. ಯಾವಾಗ ಈ ಕಾರ್ಯವನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ. ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಆರ್ಥಿಕ ಪರಿಸ್ಥಿತಿಗನುಗುಣವಾಗಿ ಬಸ್ ಘಟಕ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಆ. ಇಲ್ಲ.

ಇ. ಉದ್ಭವಿಸುವುದಿಲ್ಲ.

1619(1830)ಶ್ರೀ ಪರಮೇಶ್ವರ್ ನಾಯ್ಕ ಪಿ.ಟಿ. (ಹರಪನ ಹಳ್ಳಿ) ಮಾನ್ಯ ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಸಾರಿಗೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳು ಯಾವುವು (ಹುದ್ದೆವಾರು ವಿವರಗಳನ್ನು ನೀಡುವುದು);

ಆ. ಆ ಹುದ್ದೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು ಯಾವುವು;

ಇ. ಈ ಹುದ್ದೆಗಳು ಎಂದಿನಿಂದ ಖಾಲಿ ಇವೆ;

ಈ. ಇದುವರೆವಿಗೂ ತುಂಬದಿರಲು ಕಾರಣವೇನು;

ಉ. ಈ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ. ಹುದ್ದೆ	ಖಾಲಿ ಹುದ್ದೆಗಳ ಸಂಖ್ಯೆ
ಪ್ರಾದೇಶಿಕ ಸಾರಿಗೆ ಅಧಿಕಾರಿ	03
ಸಹಾಯಕ ಕಾನೂನು ಅಧಿಕಾರಿ	02
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ	10
ತೆರಿಗೆ/ಖಜಾನಿ ಅಧಿಕಾರಿ	01
ಅಧೀಕ್ಷಕರು	17
ಹಿರಿಯ ಮೋಟಾರು ವಾಹನ ನಿರೀಕ್ಷಕರು	04
ಮೋಟಾರು ವಾಹನ ನಿರೀಕ್ಷಕರು	138
ಪ್ರಥಮ ದರ್ಜೆ ಸಹಾಯಕರು	59
ಶೀಘ್ರಲಿಪಿಗಾರರು	05
ದ್ವಿತೀಯ ದರ್ಜೆ ಸಹಾಯಕರು	30
ವಾಹನ ಚಾಲಕರು	13
ಬೆರಳಚ್ಚುಗಾರರು	26

ಗ್ರೂಪ್–ಡಿ 38

ಒಟ್ಟು 346

ಆ. ಸಾರಿಗೆ ಇಲಾಖೆಯಲ್ಲಿ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಖಾಲಿಯಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ

ಈ. ಉದ್ಭವಿಸುವುದಿಲ್ಲ

ಉ. ಉದ್ಭವಿಸುವುದಿಲ್ಲ

1621(1832) ಶ್ರೀ ಪರಮೇಶ್ವರ್ ನಾಯ್ಕ (ಹರಪನಹಳ್ಳಿ) ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಜನತೆಯ ಸಮಸ್ಯೆಗಳನ್ನು ಪರಿಹರಿಸಲು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿದ್ದ ಸರ್ಕಾರದ ಉನ್ನತ ಮಟ್ಟದ ಸಮಿತಿ ಈಗ ಅಸ್ಥಿತ್ವದಲ್ಲಿಲ್ಲದಿರುವುದು ನಿಜವಲ್ಲವೇ;

ಆ. ಹಾಗಿದ್ದಲ್ಲಿ, ಅದನ್ನು ಪುನರ್ ರಚಿಸಲು ಇರುವ ಅಡ್ಡಿ ಆತಂಕಗಳೇನು?

ಇ. ಈ ಸಮಿತಿಯನ್ನು ಪುನರ್ ಅಸ್ಥಿತ್ವಕ್ಕೆ ಯಾವಾಗ ತರಲಾಗುವುದು?

ಡಾ : ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ. ಹೌದು.

ಆ. ಸರ್ಕಾರದ ಮೆಟ್ಟದ ಉನ್ನತ ಸಮಿತಿಯು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಚಿಸಲು ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು 1995ರ 16 ನೇ ನಿಯಮದಲ್ಲಿ ಅವಕಾಶವಿರುತ್ತದೆ. ಈ ಸಮಿತಿಯಲ್ಲಿ ಗೃಹ, ಆರ್ಥಿಕ ಮತ್ತು ಸಮಾಜ ಕಲ್ಯಾಣ ಸಚಿವರು, ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಕ್ಕೆ ಸೇರಿದ ಚುನಾಯಿತ ಲೋಕಸಭೆ / ರಾಜ್ಯಸಭೆ/ ವಿಧಾನಸಭೆ/ ವಿಧಾನ ಪರಿಷತ್ತಿನ ಸದಸ್ಯರು ಹಾಗೂ ರಾಜ್ಯಮಟ್ಟದ ಇನ್ನಿತರ ಉನ್ನತ ಅಧಿಕಾರಿಗಳು ಸದಸ್ಯರಿರಬೇಕು.

ಸಮಿತಿಯನ್ನು ಪುನರ್ ರಚಿಸಲು ಕ್ರಮಕ್ಕೆಗೊಳಲಾಗುತ್ತಿದೆ.

ಇ. ಸಮಿತಿಯನ್ನು ಶೀಘ್ರವಾಗಿ ಪುನರ್ ರಚಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ.

1622(2142) ಶ್ರೀ ಪಾಟೀಲ್ ಬಿ.ಆರ್. (ಆಳಂದ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಕರ್ನಾ ಟಕ ರಾಜ್ಯದಲ್ಲಿರುವ ದೊಡ್ಡ ನಗರ ಮಟ್ಟದ ಪಟ್ಟಣಗಳ ಸಂಖ್ಯೆ ಎಷ್ಟು; ಹಾಗೂ ಇವುಗಳಲ್ಲಿ ಪ್ಲಾಸ್ಟಿಕ್ ಸೇರಿದಂತೆ ಪ್ರತಿದಿನ ಶೇಖರವಾಗುವ ಘನತ್ಯಾಜ್ಯ ವಸ್ತುಗಳ ಪ್ರಮಾಣ ಎಷ್ಟು; ವಿವರ ನೀಡುವುದು ;

2. ಈ ಘನತ್ಯಾಜ್ಯ ವಸ್ತುಗಳಿಂದ ಕಾಂಪೊಸ್ಟ್ ಮತ್ತು ಇಂಧನ ಹಾಗೂ ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ;

3. ಈ ಕಾರ್ಯವನ್ನು ಟೆಂಡರ್ ಮೂಲಕ ಖಾಸಗಿಯವರಿಗೆ ವಹಿಸುವುದಾಗಲಿ ಅಥವಾ ಪುರಸಭೆ, ಮಹಾನಗರ ಪಾಲಿಕೆಗಳಿಗೆ ಜವಾಬ್ದಾರಿ ವಹಿಸಲಾಗುವುದೇ?

4. ಕೇಂದ್ರ ಸರ್ಕಾರದ ಯಾವುದಾದರೂ ಸಂಸ್ಥೆಗಳೊಡನೆ ಈ ಬಗ್ಗೆ ಸಂಪರ್ಕಿಸಲಾಗಿದೆಯೇ; ಸಂಪರ್ಕಿಸದಿದ್ದರೆ ಅದರ ಪ್ರಗತಿ ಏನು?

ಶ್ರೀ ಎಸ್. ಆರ್.ಮೋರೆ(ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು):

1. ದೊಡ್ಡ ನಗರ ಸಂಖ್ಯೆ : 47